**ವ್ಯಾಖ್ಯಾನ**

# <u>ದಾನದೊಳು ಕರ್ಣನೆ ಗಾನದೊಳು ನಾರಾದನೆ</u>

ಉಗಾಭೋಗದ ಚಿಂತನೆ:

> **ದಾನದೊಳು ಕರ್ಣನೆ**
>
> **ಗಾನದೊಳು ನಾರಾದನೆ**
>
> **ಜ್ಞಾನದಲಿ ವ್ಯಾಸ ಶುಕ ಮುನಿಯೇನು**
>
> **ನೀನು ದೀನರಕ್ಷಕ ನಮ್ಮ**
>
> **ಪುರಂದರ ವಿಠ್ಠಲನ ಧ್ಯಾನದೊಳು**
>
> **ಇದ್ದು ಭವ ನೀಗು ಮನುಜ**

**"ಲೌಕಿಕ ಸಾಧನೆಯಲ್ಲಿ ನಮಗಿಂತ ಕೆಳಗಿರುವವರನ್ನು ನೋಡಬೇಕು.**

**ಆಧ್ಯಾತ್ಮ ಸಾಧನೆಯಲ್ಲಿ ನಮಗಿಂತ ಹೆಚ್ಚಿನ ಸಾಧನೆ ಮಾಡಿದವರನ್ನು ನೋಡಬೇಕು."**

ಇದು ಮಹಾಭಾರತದ ಮಾತು.

ಲೌಕಿಕದಲ್ಲಿ ನಮಗಿಂತ ಹೆಚ್ಚಿನ ದುಡ್ಡು ಸ್ಥಾನ ಮಾನ ಗಳಿಸಿದವರನ್ನು ನೋಡುತ್ತಾ ಹೋದರೆ ನಮಗಿರುವ ನೆಮ್ಮದಿ ಹಾಳಾಗುತ್ತದೆ. ಅದರಂತೆ ಆಧ್ಯಾತ್ಮ ಸಾಧನೆಯಲ್ಲಿ ನಮಗಿಂತ ಕೆಳಗಿರುವವರನ್ನು ನೋಡಿದರೆ ನಾವೇ ಭಾರಿ ಎಂಬ ಗರ್ವ ಬಂದು ಮುಂದಿನ ಸಾಧನೆಗೆ ಅಡ್ಡಿಯಾಗಿಬಿಡುತ್ತದೆ.

ಇದನ್ನರಿತ ಶ್ರೀ ಪುರಂದರ ದಾಸರು, ಸಾಧನೆಯಲ್ಲಿ ಉನ್ನತ ಸ್ಥಾನದಲ್ಲಿರುವವರನ್ನು ಉಲ್ಲೇಖಿಸಿ ನಿಮ್ಮ ಸಾಧನೆ ಅಷ್ಟಂತೂ ಇಲ್ಲವಲ್ಲ, ಗರ್ವ ಪಡದಿರಿ ಎಂದು ಈ ಉಗಾಭೋಗದಲ್ಲಿ ಉಪದೇಶಿಸುತ್ತಿದ್ದಾರೆ.

ನಾವು ನಮ್ಮಲ್ಲಿರುವ ಸರ್ವಸ್ವವನ್ನೂ ದಾನಮಾಡಿದರೂ ಕರ್ಣನ ಸಮ ದಾನ ವಾಗಲಾರದು. ಅವನು ತನ್ನೊಂದಿಗೆ ಹುಟ್ಟಿನಿಂದೇ ಬಂದ ಕವಚವನ್ನೇ, ಅದೂ ಇಂದ್ರ ದೇವರು ತನ್ನ ಎದುರಾಳಿ ಅರ್ಜುನನ ಗೆಲುವಿಗಾಗಿ ಕೇಳುತ್ತಿರುವನೆಂದು ಗೊತ್ತಿದ್ದೂ ದಾನ ಮಾಡಿದನು.

ಆದ್ದರಿಂದ ದಾಸರು ದಾನದೊಳು ಕರ್ಣನೆ ಎನ್ನುತ್ತಾರೆ.
ಗಾನದೊಳು ನಾರದನೆ ಗಾನ ಸೇವೆಯನ್ನೇ ತಮ್ಮ ಸಾಧನೆಯಾಗಿ ಉಳ್ಳ ನಾರದರಿಗೆ ಯಾರು ತಾನೇ ಸಮರಾದಾರು.

ಇನ್ನು ಜ್ಞಾನದಲ್ಲಿ ವ್ಯಾಸ ಶುಕಮುನಿಯೇ ಎನ್ನುವುದರಿಂದ ನಾವು ಜ್ಞಾನಕ್ಕಾಗಿ ಅಧ್ಯಯನ ಮಾಡುವ ಪುರಾಣೇತಿಹಾಸಗಳನ್ನು ರಚನೆ ಮಾಡಿದ ವ್ಯಾಸರಿಗೆ, ಉಪದೇಶಿಸಿದ ಶುಕರಿಗೆ ಸಮರಾಗಲು ಸಾಧ್ಯವೆ?

ಭಗವಂತ ಯಾರಿಗೆ ಒಲಿಯುತ್ತಾನೆ ಎನ್ನುವುದಕ್ಕೆ ಒಂದು ವೇದೋಕ್ತಿ ಇದೆ.

**"ಯಮೇವ ಏಷ ವೃಣುತೇ ತೇನ ಲಭ್ಯ:"** ಎಂದು.

ಅಂದರೆ ಶ್ರೀಹರಿ ತನ್ನ ಇಚ್ಛೆಗೆ ಬಂದವರನ್ನು ಉದ್ಧರಿಸುತ್ತಾನೆ. ಅವನ ಇಚ್ಛೆ ಆಗುವವರೆಗೆ ಸುಮ್ಮನಿರಬೇಕು. **"ಹರಿನಿನ್ನೊಲುಮೆಯು ಆಗುವತನಕ ಅರಿತು ಸುಮ್ಮನಿರುವುದೆ ಲೇಸು...."** ಎಂದಿದ್ದಾರೆ ಇದೇ ಶ್ರೀ ಪುರಂದರ ದಾಸರು. ಇವರದೇ **"ಗರ್ವವ್ಯಾತಕೊ ನಿನಗೆ ಪಾಮರ ಮನುಜ...."** ಎಂಬ ಕೀರ್ತನೆಯಲ್ಲಿ ಇದೇ ವಿಷಯವನ್ನು ವಿಸ್ತಾರವಾಗಿ ಹೇಳಿದ್ದಾರೆ.

ದಾಸರ ಆಜ್ಞೆಯಂತೆ-
ಉತ್ತಮರನ್ನು ಅನುಸರಿಸಿ ಸಾಧನೆ ಮಾಡುತ್ತ ಅಹಂಕಾರ ಮಾತ್ಸರ್ಯಾದಿಗಳನ್ನು ಬಿಟ್ಟು ಹರಿ ಒಲುಮೆ ಆಗುವವರೆಗೆ ಧ್ಯಾನ ಮಾಡೋಣ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ